

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಧರ್ಮ ಸಮನ್ವಯ....

ಜಗತ್ಪ್ರಸಿದ್ಧವಾದ ಬೇಲೂರು ಶ್ರೀ ಚೆನ್ನಕೇಶವ ದೇವಾಲಯವನ್ನು ನೋಡಲು ಹೋದ ಪ್ರವಾಸಿಗರ ಸಂಖ್ಯೆಗೆ ಲೆಕ್ಕವಿಲ್ಲ. ವಿದೇಶೀ ಪ್ರವಾಸಿಗರು ಮಂತ್ರಮುಗ್ಧರಾಗಿ ಕಣ್ಣರಳಿಸಿ ನೋಡಿ ಕ್ಯಾಮರಾ ಕ್ಲಿಕ್ ಮಾಡಿದರೆ, ನಮ್ಮವರು ಬೇಜವಾಬ್ದಾರಿಯಿಂದ ಕೈಗೆ ಸಿಕ್ಕ ಕಡೆಯೆಲ್ಲಾ ಕಲ್ಲಿನಿಂದ ಕುಟ್ಟುವ ಘನಂದಾರೀ ಕೆಲಸ ಮಾಡುತ್ತಾರೆ. ದೇವಾಲಯವನ್ನು ಕಟ್ಟಿದ ಚಕ್ರವರ್ತಿ ವಿಷ್ಣುವರ್ಧನನಾಗಲೀ, ಆತನ ಪಟ್ಟದರಸಿ 'ನಾಟ್ಯ ರಾಣಿ' ಶಾಂತಲೆಯಾಗಲೀ, ಶಿಲ್ಪಿ ಜಕಣಾಚಾರಿಯಾಗಲೀ ದೇವಾಲಯದ ಯಾವ ಕಂಬದಲ್ಲೂ ತಮ್ಮ ಹೆಸರನ್ನು ಕೆತ್ತಿಲ್ಲ. ಆದರೆ ಈ ದೇವಸ್ಥಾನ ಕಟ್ಟಲು ಒಂದು ಸಣ್ಣ ಕಲ್ಲನ್ನೂ ಹೊತ್ತು ತಂದಿಡದ, ಬದುಕಿರುವಾಗಲೇ ಅನಾಮಿಕರಾದ ಈ ಕಿರಾತರು ತಮ್ಮ ಹೆಸರನ್ನು ಕಂಬಗಳ ಮೇಲೆ ಕೆತ್ತಿ ಕುರೂಪಗೊಳಿಸುತ್ತಾರೆ. ವಿಷ್ಣವರ್ಧನನೇನಾದರೂ ಬದುಕಿದ್ದರೆ ಖಂಡಿತವಾಗಿಯೂ ಈ ಕಿರಾತಕರ ತಲೆಗಳನ್ನು ಕತ್ತರಿಸಿ ದೇವಾಲಯದ ಪ್ರವೇಶದ್ವಾರಕ್ಕೆ ತೋರಣ ಕಟ್ಟುತ್ತಿದ್ದ. ದೇವಾಲಯದ ಪ್ರಾಂಗಣದಲ್ಲಿ ಯಾವ ಪ್ರವಾಸಿಗರೂ ಅಷ್ಟಾಗಿ ಗಮನಿಸದ ಒಂದು ಶಾಸನದಲ್ಲಿ ವಿಷ್ಣುವರ್ಧನನು ಅತ್ಯಂತ ಅರ್ಥಪೂರ್ಣವಾದ ಒಂದು ಸಂಸ್ಕೃತ ಶ್ಲೋಕವನ್ನು ಕೆತ್ತಿಸಿದ್ದಾನೆ. ಅದು ಹೀಗಿದೆ:

**ಯಂ ಶೈವಾಃ ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನಃ**
**ಬೌದ್ಧಾಃ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ ।**
**ಅರ್ಹನ್ ಇತ್ಯಥ ಜೈನಶಾಸನರತಾಃ ಕರ್ಮೇತಿ ಮೀಮಾಂಸಕಾಃ**
**ಸೋಽಯಂ ವೋ ವಿದಧಾತು ವಾಂಛಿತಫಲಂ ಶ್ರೀ ಕೇಶವೇಶಃ ಸದಾ ॥**

'ಯಾರನ್ನು ಶೈವರು ಶಿವನೆಂದೂ, ವೇದಾಂತಿಗಳು ಬ್ರಹ್ಮನೆಂದೂ, ಬೌದ್ಧರು ಬುದ್ಧನೆಂದೂ, ನೈಯಾಯಿಕರು ಕರ್ತನೆಂದೂ, ಜೈನರು ಅರ್ಹನ್ ಎಂದೂ, ಮೀಮಾಂಸಕರು ಕರ್ಮವೆಂದೂ ಕರೆಯುತ್ತಾರೋ ಆ ಲೋಕದೊಡೆಯನಾದ ಕೇಶವನು ನಿಮ್ಮ ಇಷ್ಟಾರ್ಥಫಲಗಳನ್ನು ನೆರವೇರಿಸಲಿ!' ಎಂದು ಇದರ ಅರ್ಥ. ಅತ್ಯದ್ಭುತ ಶಿಲ್ಪಕಲೆಯ ಬೀಡಾದ ಚೆನ್ನಕೇಶವ ದೇವಾಲಯದಷ್ಟೇ ಚೆನ್ನಾದ ಮತ್ತು ಅನುಪಮವಾದ ಈ ಸಂಸ್ಕೃತ ಶ್ಲೋಕವು ನಮ್ಮ ನಾಡಿನ ಪೂರ್ವಜರು ಸಾಧಿಸಿ ತೋರಿಸಿದ ಧರ್ಮಸಮನ್ವಯ ದೃಷ್ಟಿಯ ದ್ಯೋತಕವಾಗಿದೆ. ಬೇಲೂರು ದೇವಾಲಯವು ಕವಿಯ ದೃಷ್ಟಿಯಲ್ಲಿ ಶಿಲ್ಪಕಲಾಕೃತಿಗಳ ಬಾಹ್ಯಸೌಂದರ್ಯದ 'ಕಲೆಯ ಬಲೆ'ಯಾದರೆ, ಈ ಶ್ಲೋಕದಲ್ಲಿರುವ ಧರ್ಮಸಮನ್ವಯ ದೃಷ್ಟಿಯು ನಮ್ಮ ನಾಡಿನ ಜನರ ಅಂತರಂಗದ ಆತ್ಮಸೌಂದರ್ಯದ ಆಧ್ಯಾತ್ಮಿಕ ಸೆಲೆಯಾಗಿದೆ. ಋಗ್ವೇದದ "ಏಕಂ ಸತ್ ವಿಪ್ರಾ ಬಹುಧಾ ವದಂತಿ" ಎಂಬ ಮಂತ್ರವಾಗಲೀ, ಬಸವಣ್ಣನವರ "ದೇವನೊಬ್ಬ ನಾಮ ಹಲವು" ಎಂಬ ವಚನವಾಗಲೀ ಇದೇ ಧರ್ಮಸಮನ್ವಯ ದೃಷ್ಟಿಯನ್ನು ಪ್ರತಿಪಾದಿಸುವ ಅಣಿಮುತ್ತುಗಳಾಗಿವೆ.

ಜೀವ-ಜಗತ್ತು-ದೇವರು ಮತ್ತು ಅವುಗಳ ಮಧ್ಯೆ ಇರುವ ಸಂಬಂಧ ಮತ್ತು ಸಾವಿನಾಚೆಯ ಸ್ಥಿತಿ ಇವುಗಳ ಜಿಜ್ಞಾಸೆಯಿಂದ ವಿಚಾರ ಮಾಡಲು ತೊಡಗಿದ ಪ್ರಪಂಚದ ಅನೇಕ ದಾರ್ಶನಿಕರು ಮತ್ತು ಅನುಭಾವಿಗಳು ಆಯಾಯ ದೇಶ-ಕಾಲಗಳಲ್ಲಿದ್ದ ಸಾಮಾಜಿಕ ಧಾರ್ಮಿಕ ಸನ್ನಿವೇಶಗಳಿಗೆ ಸ್ಪಂದಿಸುವುದರ ಜೊತೆಗೆ ದೇಶಕಾಲಗಳನ್ನು ಮೀರಿ ನಿಲ್ಲಬಲ್ಲ ಆತ್ಯಂತಿಕ ಸತ್ಯವನ್ನು ಪ್ರತಿಪಾದಿಸಿದ್ದಾರೆ. ಆದ ಕಾರಣವೇ ಭಿನ್ನ ಭಿನ್ನ ದೇಶ, ಬಿನ್ನ ಭಿನ್ನ ಪ್ರಾಂತ್ಯ ಮತ್ತು ಭಿನ್ನ ಭಿನ್ನ ಕಾಲಗಳಲ್ಲಿ ಹುಟ್ಟಿ ಒಬ್ಬರು ಮತ್ತೊಬ್ಬರನ್ನು ಸಂಧಿಸಲು ಅವಕಾಶವಾಗದೆ ಸ್ವತಂತ್ರವಾಗಿ ಚಿಂತನೆ ಮಾಡಿದ್ದರೂ, ಭಿನ್ನ ಭಿನ್ನ ಭಾಷೆಗಳಲ್ಲಿರುವ ಅವರ ಮೂಲಭೂತ ಚಿಂತನೆಗಳು ದೇಶ-ಕಾಲಗಳ ಗಡಿಬಾಂದುಗಳನ್ನು ದಾಟಿ ಏಕೀಭಾವದಿಂದ ಮೇಳವಿಸಿ ಮೂರ್ತರೂಪಗೊಂಡಿರುವುದನ್ನು ಇಂದಿಗೂ ಕಾಣಬಹುದಾಗಿದೆ.

**ಆಕಾಶಾತ್ ಪತಿತಂ ತೋಯಂ ಯಥಾ ಗಚ್ಛತಿ ಸಾಗರಂ ।**
**ಸರ್ವದೇವನಮಸ್ಕಾರಃ ಕೇಶವಂ ಪ್ರತಿ ಗಚ್ಛತಿ ॥**

ಆಕಾಶದಿಂದ ಬಿದ್ದ ಮಳೆಯ ನೀರು ಹಳ್ಳ ಕೊಳ್ಳಗಳಾಗಿ ನದಿಗಳ ಮೂಲಕ ಹರಿದು ಹೇಗೆ ಸಮುದ್ರವನ್ನು ಸೇರುತ್ತದೆಯೋ ಹಾಗೆಯೇ ಎಲ್ಲ ಧರ್ಮಗಳ ಆರಾಧನೆಯೂ ಒಬ್ಬ ದೇವನಿಗೇ ತಲುಪುತ್ತದೆ. ನದಿಗಳು ಅನೇಕ, ಅವುಗಳ ಹೆಸರೂ ವಿಭಿನ್ನ. ಅವುಗಳು ಹರಿಯುವ ನೆಲ, ನೀರಿನ ಪಾತ್ರ, ಗತಿ, ಕ್ರಮಿಸುವ ದೂರ ಎಲ್ಲವೂ ವಿಭಿನ್ನವೇ. ಆದರೂ ಅವುಗಳು ಕೊನೆಯಲ್ಲಿ ಸೇರುವ ನೆಲೆ ಅಥವಾ ತಾಣ ಮಾತ್ರ ಒಂದೇ. ಅದೇ ಸಮುದ್ರ.

ಅಂತಹ ಸಮುದ್ರವನ್ನು ಸೇರಿ ತನ್ನ ನಾಮ-ರೂಪವನ್ನು ಕಳೆದುಕೊಂಡು ಒಂದಾಗುವ ಮುನ್ನ ಒಂದೊಂದು ನದಿಯೂ ವಿಭಿನ್ನವಾಗಿ, ವಿಶಿಷ್ಟವಾಗಿ, ನಯನ ಮನೋಹರವಾಗಿ ಕಣ್ಣಿಗೆ ಗೋಚರಿಸುತ್ತದೆ. ಹಾಗೆಯೇ ಜಗತ್ತಿನ ಧರ್ಮಗಳೂ ಸಹ. ಕೆಲವು ನದಿಗಳು ಸಮುದ್ರ ಸೇರುವ ಮೊದಲೇ ಯಾವುದೋ ಒಂದು ಘಟ್ಟದಲ್ಲಿ ಪರಸ್ಪರ ಒಂದಾಗಿ ಸೇರಿ ಮುಂದೆ ಹರಿಯುವುದುಂಟು. ಒಂದು ಮತ್ತೊಂದರಲ್ಲಿ ಭೇದವಿಲ್ಲದೆ ಬೆರೆತು ತುಂಬಿ ಹರಿವ ತುಂಗಭದ್ರೆಯಲ್ಲಿ ಯಾವುದು ತುಂಗೆ, ಯಾವುದು ಭದ್ರೆ? ಎಂತಹ ಸಮರಸವಾದ ಬಾಳುವೆ ಈ ತುಂಗಭದ್ರೆಯರದು! ಮಲೆನಾಡಿನ ಗುಡ್ಡ ಬೆಟ್ಟಗಳಲ್ಲಿ ಒಂಟಿಯಾಗಿ ಭಯಭೀತಿಯಿಂದ ಓಡಿ ಬರುವ ಈ ನದಿಗಳು ಅಕ್ಕ-ತಂಗಿಯರಂತೆ ಮುಂದೆ ಒಂದಾಗಿ ಬಯಲು ಸೀಮೆಯಲ್ಲಿ ಸಾಗುವ ಮೆಲ್ಲ ಮೆಲ್ಲನೆಯ ನಿರ್ಭೀತ ನಡಿಗೆಯನ್ನು ನೋಡುವುದು ಅದೆಷ್ಟು ನಯನ ಮನೋಹರ! ಹೀಗೆಯೇ ಭಿನ್ನ ಭಿನ್ನ ಪ್ರಾಂತ್ಯ ಪ್ರದೇಶ ಕಾಲಗಳಲ್ಲಿ ಜನಿಸಿದ ಧರ್ಮಗಳು ಒಂದುಗೂಡಿ ಲೋಕೋದ್ಧಾರದ, ಆತ್ಮೋನ್ನತಿಯ ಉದಾತ್ತ ಕಾರ್ಯಗಳನ್ನು ಮಾಡಬೇಕಾಗಿತ್ತು. ಆದರೆ ದುರ್ದೈವದಿಂದ ನಾವು ಇಂದು ಕಾಣುತ್ತಿರುವ ದೃಶ್ಯವೇ ಬೇರೆ. ತಾತ್ವಿಕವಾಗಿ ಧರ್ಮ ಧರ್ಮಗಳ ಮಧ್ಯೆ ಯಾವುದೇ ಭೇದ ಇಲ್ಲದಿದ್ದರೂ, ವ್ಯಾವಹಾರಿಕ ಜೀವನದಲ್ಲಿ ಅದರಲ್ಲೂ ವಿಶೇಷವಾಗಿ ರಾಜಕೀಯರಂಗದಲ್ಲಿ ವಿಭಿನ್ನ ಧರ್ಮೀಯರ ಮಧ್ಯೆ ಅನೇಕ ಸಂಘರ್ಷಗಳು ಸಂಭವಿಸುವುದನ್ನು ನೋಡುತ್ತೇವೆ. ಈ ಸಂಘರ್ಷಗಳು ಯಾವುದೇ ತಾತ್ವಿಕ ಭಿನ್ನಾಭಿಪ್ರಾಯಗಳಿಂದ ಉಂಟಾಗದೆ, ವ್ಯಕ್ತಿಗತವಾದ ಲೌಕಿಕ ದುರ್ಭಾವನೆಗಳಿಂದ ಉಂಟಾಗುತ್ತಿವೆಯೆಂದರೆ ಸತ್ಯವನ್ನೇ ಹೇಳಿದಂತಾಗುತ್ತದೆ. ಪರಸ್ಪರ ಪ್ರೀತಿ ವಿಶ್ವಾಸಗಳು ಬೆಳೆಯಬೇಕಾದ ಹೃದಯದಲ್ಲಿ ಪರಸ್ಪರ ಸಂಶಯ, ಅನುಮಾನಗಳು ಹುಟ್ಟಿ, ಒಂದಿಲ್ಲೊಂದು ಕ್ಷುಲ್ಲಕ ಕಾರಣದಿಂದ ದ್ವೇಷದ ಕಿಡಿ ಹತ್ತಿ ಕ್ಷಣಾರ್ಧದಲ್ಲಿ ಭುಗಿಲೆದ್ದು ಉರಿಯುವ ಕೋಮು ದಳ್ಳುರಿಯಲ್ಲಿ ಮಾನವತೆಯು ಬೆಂದು ಕರಕಾಗಿ ಹೋಗುತ್ತಿದೆ.

ಬಸ್ಸಿನಲ್ಲೋ, ಕಾರಿನಲ್ಲೋ ಪ್ರಯಾಣಿಸುವಾಗ ರಸ್ತೆಯ ಅಂಚಿನಲ್ಲಿ "Roads bring people together" ಎಂಬ ಮಾರ್ಮಿಕ ನುಡಿಯುಳ್ಳ ಫಲಕಗಳು ಅಲ್ಲಲ್ಲಿ ಕಾಣಸಿಗುತ್ತವೆ. ರಸ್ತೆಗಳು ಜನರನ್ನು ಹತ್ತಿರಕ್ಕೆ ತರುತ್ತವೆ ಎಂದು ಇದರ ಅರ್ಥ. ನಿಜ. ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗುವ ಜನರು ಮೊದಲಿಗಿಂತಲೂ ವೇಗವಾಗಿ ಪಯಣಿಸಿ ಬೇಗ ತಲುಪಲು ಈ ಆಧುನಿಕ ರಸ್ತೆಗಳು ಮತ್ತು ವಾಹನಗಳು ಸಹಾಯಕವಾಗಿವೆಯೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆದರೆ ಈ ರಸ್ತೆಗಳು ಮತ್ತು ಈ ವಾಹನಗಳು ಜನರನ್ನು ಭೌತಿಕವಾಗಿ ಹತ್ತಿರ ಹತ್ತಿರ ತಂದಿವೆಯೇ ಹೊರತು ಅವರ ಹೃದಯವನ್ನು ಹತ್ತಿರ ಹತ್ತಿರ ತರುವಲ್ಲಿ ಎಷ್ಟರ ಮಟ್ಟಿಗೆ ಫಲಕಾರಿಯಾಗಿವೆ? ಜೊತೆ ಜೊತೆಯಲ್ಲಿಯೇ ಕುಳಿತು ಪ್ರಯಾಣಿಸುತ್ತಿದ್ದರೂ ಪಕ್ಕದ ಸಹ ಪ್ರಯಾಣಿಕರ ಕಷ್ಟ ಸುಖಗಳನ್ನು ಅರ್ಥ ಮಾಡಿಕೊಳ್ಳುವ ಹೃದಯವಂತಿಕೆ ಇಲ್ಲದ ನಿರ್ದಯಿ ಜನ! ಧೂಮಪಾನ ಹಿಡಿಸದ ವ್ಯಕ್ತಿಯೊಬ್ಬ ಮೆಲುದನಿಯಲ್ಲಿ ಆಕ್ಷೇಪಿಸಿದರೆ, ಆತನ ಮುಖಕ್ಕೇ ಹೊಗೆಯನ್ನು ಊದಿ 'ನನ್ನ ಹತ್ತಿರವೂ ಟಿಕೆಟ್ ಇದೆ' ಎಂದು ಠೇಂಕಾರದ ಮಾತುಗಳನ್ನಾಡುವ ಮೊಂಡು ಜನ! ಪಕ್ಕದಲ್ಲಿ ಇನ್ನೊಬ್ಬರಿಗೆ ಕುಳಿತು ಕೊಳ್ಳಲು ಇದ್ದುದರಲ್ಲಿಯೇ ಸುಧಾರಿಸಿಕೊಂಡು ಸ್ವಲ್ಪ ಜಾಗ ಮಾಡಿಕೊಡಲು ಸಾಧ್ಯವಿದ್ದರೂ 'ನಾನೇನೂ ಅರ್ಧ ಟಿಕೆಟ್ ತೆಗೆದುಕೊಂಡಿಲ್ಲ, ಪೂರ್ತಿ ಟಿಕೆಟ್ ತೆಗೆದುಕೊಂಡಿದ್ದೇನೆ' ಎಂದು ಹುಬ್ಬು ಗಂಟಿಕ್ಕಿ ಕಾಲುಗಳನ್ನು ಹಿಗ್ಗಿಸಿ ಕುಳಿತುಕೊಳ್ಳುವ ಪ್ರಯಾಣಿಕರು ಅದೆಷ್ಟು ಜನ ನಮ್ಮಲ್ಲಿಲ್ಲ. ಹೀಗಿರುವಾಗ ಧರ್ಮಸಮನ್ವಯದ ದೊಡ್ಡ ಮಾತು ಒಂದೆಡೆ ಇರಲಿ, ನಮ್ಮ ಜನರಿಗೆ ಈ ಸಭ್ಯ, ಸುಸಂಸ್ಕೃತ ನಾಗರಿಕ ನಡವಳಿಕೆಗಳನ್ನು ಕಲಿಸಿಕೊಡಬಲ್ಲವರಾರು? ಕಲಿಯಬೇಕಾದ್ದು ಎಲ್ಲಿ ಮತ್ತು ಹೇಗೆ? ಎಂದು ಕೇಳಬೇಕಾಗಿದೆ. ಎಷ್ಟೋ ವೇಳೆ ಈ ರಸ್ತೆಗಳಲ್ಲಿ ಸಂಚರಿಸುವ ವಾಹನಗಳು ಚಾಲಕರ ನಿರ್ಲಕ್ಷ್ಯದಿಂದ ಅಥವಾ ಪಾನಮತ್ತತೆಯಿಂದ ಅಪಘಾತಕ್ಕೆ ಒಳಗಾಗಿ, ಅವುಗಳಲ್ಲಿ ಕುಳಿತ ಪ್ರಯಾಣಿಕರ ಪ್ರಾಣವೇ ಎರವಾಗಬೇಕಾಗುತ್ತದೆ. ಮೇಲೆ ಉಲ್ಲೇಖಿಸಿದ "Roads bring people together" ಎಂಬ ಇಂಗ್ಲೀಷ್ ನಾಣ್ಣುಡಿಯನ್ನು ಬದಲಾಯಿಸಿ "Roads lead people to Death" ಎಂದು ಹೇಳಬೇಕೆನಿಸುತ್ತದೆ. ಹೀಗೆ ಧರ್ಮ ಧರ್ಮಗಳು ಆಯಾಯ ಧರ್ಮೀಯರನ್ನು ಸರಿಯಾದ ದಾರಿಯಲ್ಲಿ ಕರೆದೊಯ್ಯುವ ಬದಲು ಮತಾಂಧತೆಯಿಂದ ಪರಸ್ಪರ ಡಿಕ್ಕಿ ಹೊಡೆಸಿ ಅಮಾಯಕರ ಪ್ರಾಣ ತೆಗೆಯುತ್ತಿವೆ.

ನಮಗೆ ಇಂದು ಬೇಕಾಗಿರುವುದು ಜನರನ್ನು ಭೌತಿಕವಾಗಿ ಹತ್ತಿರ ಹತ್ತಿರಕ್ಕೆ ಕರೆತರುವುದಲ್ಲ; ಜನರ ಹೃದಯವನ್ನು ಭಾವನಾತ್ಮಕವಾಗಿ ಹತ್ತಿರ ಹತ್ತಿರಕ್ಕೆ ಕರೆತರುವುದು. ಈ ಕೆಲಸವು ಆಧುನಿಕ ವಿಜ್ಞಾನದಿಂದ ಸಾಧ್ಯವಿಲ್ಲ; ನಿಜವಾದ ಧರ್ಮದಿಂದ ಮಾತ್ರ ಸಾಧ್ಯ.

**ದಯವಿಲ್ಲದ ಧರ್ಮವದೇವುದಯ್ಯಾ ?**
**ದಯವೇ ಬೇಕು ಜಗದ ಪ್ರಾಣಿಗಳೆಲ್ಲರಲ್ಲಿಯೂ**
**ದಯವೇ ಧರ್ಮದ ಮೂಲವಯ್ಯಾ ।**

ಎಂದರು ಬಸವಣ್ಣನವರು. ದಯವೇ ಧರ್ಮದ ಭದ್ರ ಬುನಾದಿ. ಸಂಕಷ್ಟಗಳಲ್ಲಿ ತೊಳಲಾಡುತ್ತಿರುವ ದೀನ ದುರ್ಬಲರನ್ನು ಕಂಡು ಮರುಗುವುದೇ ಧರ್ಮ. ಅಸಹಾಯಕರನ್ನು ಕಂಡು ನೆರವಾಗುವುದೇ ಧರ್ಮ. ಆದರೆ ಇಂದು ಒಬ್ಬರು ಮತ್ತೊಬ್ಬರನ್ನು ಕಂಡು ಕರುಬುವುದೇ ಧರ್ಮವಾಗಿದೆ; ಮೇಲೇರಿ ಹೋಗುತ್ತಿರುವವರ ಕಾಲು ಹಿಡಿದು ಜಗ್ಗುವುದೇ ಜೀವನದ ಪರಮ ಧ್ಯೇಯವಾಗಿದೆ.

ಇಂದು ಧರ್ಮವು ಕಂದಾಚಾರದ ಕೊಂಪೆಯಾಗಿದೆ. ಡಂಭಾಚಾರದ ಸರಕಾಗಿದೆ. ಪೇಟೆಯ ಒಂದು ಬಡಾವಣೆಯಲ್ಲಿ ಹತ್ತು ಅಡಿ ಎತ್ತರದ ಗಣಪತಿಯನ್ನು ತಂದು ಕೂರಿಸಿದರೆ, ಮತ್ತೊಂದು ಬಡಾವಣೆಯಲ್ಲಿ ಪೈಪೋಟಿಯ ಮೇಲೆ ಇಪ್ಪತ್ತು ಅಡಿ ಎತ್ತರದ ಗಣಪತಿಯನ್ನು ತಂದು ಕೂರಿಸುತ್ತಾರೆ. ಮೂಲೆ ಮೂಲೆಗಳಲ್ಲಿ ಗೀಳಿಡುವ ಬೀದಿಯ ನಾಯಿಗಳಂತೆ ನಾಲ್ಕೂ ದಿಕ್ಕುಗಳಿಂದ ಕಿವಿಗಡಚಿಕ್ಕುವ ಮೈಕುಗಳ ಕೋಲಾಹಲ. ಕೆಟ್ಟ ಸಿನೇಮಾ ಹಾಡುಗಳ ಅರ್ಭಟದ ಮಧ್ಯೆ ಯಾಂತ್ರಿಕವಾಗಿ ಮಾಡುವ ಪೂಜೆಯು ಆ ವಿಘ್ನೇಶ್ವರನಿಗೇ ಪ್ರೀತಿ. ಒಂದು ಕಡೆ ಗಣಪತಿಯ ಪೆಂಡಾಲುಗಳಲ್ಲಿ, ಮತ್ತೊಂದೆಡೆ ಮಸೀದಿಯ ಮೇಲು ಗೋಪುರಗಳಲ್ಲಿ, ಮಗುದೊಂದೆಡೆ ಮದುವೆ ಮನೆಯ ಸಂಭ್ರಮದ ಮಂಟಪಗಳಲ್ಲಿ ರಾತ್ರಿಯೆಲ್ಲಾ ಅರ್ಭಟಿಸುವ ಮೈಕಾಸುರನ ಹಾವಳಿಯಿಂದ ನಿದ್ರಾಭಂಗವಾಗದಂತೆ ರಕ್ಷಿಸಲು ಬಡಾವಣೆಯ ಶಾಂತಿಪ್ರಿಯರು ಆ ವಿಘ್ನನಿವಾರಕನಿಗೆ ಮೊರೆಯಿಟ್ಟರೆ ಆಶ್ಚರ್ಯವೇನೂ ಇಲ್ಲ. ಆ ವಿಘ್ನೇಶ್ವರನ ಪಾಡೋ ಹೇಳತೀರದು. ನೀರಿಲ್ಲದ ಹಾಳು ಬಾವಿಯೇ ಅವನಿಗೆ ಗತಿ. ಭಾದ್ರಪದ ಶುಕ್ಲದ ಚೌತಿಯಂದು ಪೂಜೆ ಮಾಡಿ ತಮಗೆ ಬೇಕಾದ ವರಗಳನ್ನು ಪಡೆದ ಮೇಲೆ ನಿರ್ದಯಿ ಭಕ್ತರು ನೀರಿಲ್ಲದ ಬಾವಿಗೆ ಅವನನ್ನು ದೂಡುವಾಗ ಡೊಳ್ಳು ಹೊಟ್ಟೆಯ ಗಣಪನು "ಅಯ್ಯೋ ಸತ್ತೆ ಸತ್ತೆ"ನೆಂದು ಎದೆಯೊಡೆದುಕೊಂಡು ಬೀಳುತ್ತಿರಬಹುದು!

ಧಾರ್ಮಿಕ ನಂಬಿಕೆಗಳು ಮತ್ತು ನಡವಳಿಕೆಗಳು ಇರುವುದು ಅಂತರಂಗದ ಆತ್ಮದ ವಿಕಾಸಕ್ಕಾಗಿಯೇ ಹೊರತು ಆಡಂಬರದ ಬಾಹ್ಯ ಪ್ರದರ್ಶನಕ್ಕಾಗಿ ಅಲ್ಲ. ಆದರೆ ಇಂದು ನಮ್ಮ ಜನರ ಹೃದಯದಲ್ಲಿ ಅಲೌಕಿಕ ಭಕ್ತಿ ಭಾವನೆಗಳಿಗಿಂತ ಮಿಗಿಲಾಗಿ ಲೌಕಿಕ ಹ್ಯಾವ ಭಾವಗಳೇ ತುಂಬಿ ತುಳುಕಾಡುತ್ತಿವೆ. ಮನುಷ್ಯನ ಹೃದಯದ ಭಾವನೆಗಳು ಎಷ್ಟೊಂದು ಬತ್ತಿ ಹೋಗಿವೆಯೆಂದರೆ ಅವನ ಹೃದಯವು ನೀರಿಲ್ಲದ ಜಲಾಶಯದಂತೆ ಸಂಪೂರ್ಣ ಶುಷ್ಕವಾಗಿ ಹೋಗಿದೆ. ಅವನ ನಡೆ ನುಡಿಗಳಲ್ಲಿ ಕೃತ್ರಿಮತೆಯು ಗೂಡುಗಟ್ಟಿದೆ. ಅವನ ಹೃದಯದಲ್ಲಿ ನೈಜತೆ ಇಲ್ಲ, ನಿರ್ವ್ಯಾಜ ಪ್ರೇಮವಿಲ್ಲವೆಂಬುದನ್ನು ನಿಚ್ಚಳವಾಗಿ ನೋಡಬಹುದಾಗಿದೆ. ಎದುರಿಗೇ ಒಂದು; ಮರೆಯಲ್ಲಿಯೇ ಮತ್ತೊಂದು! 'ಸಲಾಮಾಲೆಕುಂ' ಎಂದು ಎದುರಿಗೆ ಹಲ್ಲು ಕಿಸಿದು ಹೇಳಿದವನು ಒಂದು ಹೆಜ್ಜೆ ಮುಂದಿಟ್ಟೊಡನೆ 'ಮಾರ್ ಸಾಲೆ ಕೋ' ಎಂದು ಹಲ್ಲು ಕಡಿಯುತ್ತಾನೆ! ಯಾರು ಯಾರನ್ನೂ ನಂಬಲಾಗದಂತಹ ದುಃಸ್ಥಿತಿ. ಜನರು ಧರ್ಮಗಳನ್ನು ತಮ್ಮಲ್ಲಿರುವ ಆಸುರೀಗುಣಗಳ ನಿವಾರಣೆಗೆ, ದೈವೀಗುಣಗಳ ನೆಲೆಗೊಳ್ಳುವಿಕೆಗೆ ಬಳಸಿಕೊಳ್ಳುವ ಬದಲು ತಮ್ಮ ಪಾಶವೀಕೃತ್ಯಗಳಿಗೆ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ.

ಯಾವ ಧರ್ಮವೂ ಮತ್ತೊಂದು ಧರ್ಮದವರನ್ನು ದ್ವೇಷಿಸಲು ಉಪದೇಶಿಸಿಲ್ಲ. ಆದರೆ ಜಗತ್ತಿನ ಯಾವುದೇ ದೇಶವನ್ನು ತೆಗೆದುಕೊಂಡರೂ ಧರ್ಮದ ಹೆಸರಿನಲ್ಲಿ ದೇವರ ಹೆಸರಿನಲ್ಲಿ ರಕ್ತಪಾತ, ಕಗ್ಗೊಲೆಗಳು ನಡೆಯದೇ ಬಿಟ್ಟಿಲ್ಲ. ಜಗತ್ತಿನ ವಿವಿಧ ಮತಧರ್ಮಗಳು ಒಂದು ಸುಂದರವಾದ ಉದ್ಯಾನವನದಲ್ಲಿ ಪ್ರವಾಸಿಗರ ಕಣ್ಮನಗಳನ್ನು ತಣಿಸುವ ಸುಂದರ ಪುಷ್ಪಗಳಿದ್ದಂತೆ. ಪ್ರತಿಯೊಂದು ಹೂವಿಗೂ ತನ್ನದೇ ಆದ ವಿಶಿಷ್ಟ ಸೌಂದರ್ಯವಿರುತ್ತದೆ. ಉದ್ಯಾನವನದಲ್ಲಿ ಕಂಗೊಳಿಸುವ ಪ್ರತಿಯೊಂದು ಹೂವು ತನ್ನ ವ್ಯಷ್ಟಿ ಸೌಂದರ್ಯದೊಂದಿಗೆ ಉದ್ಯಾನವನದ ಸಮಷ್ಟಿ ಸೌಂದರ್ಯವನ್ನು ವರ್ಧಿಸುತ್ತದೆ. ಆ ಉದ್ಯಾನವನಕ್ಕೆ ಕಾಲಿರಿಸಿದ ಪ್ರವಾಸಿಗನು ತನ್ನ ಸೌಂದರ್ಯ ಪ್ರಜ್ಞೆಗೆ ಒಪ್ಪಿತವಾದ ಯಾವುದೋ ಒಂದು ಹೂವನ್ನು ಕೈಗೆತ್ತಿಕೊಳ್ಳುತ್ತಾನೆ. ಅದರ ಸುವಾಸನೆಯನ್ನು ಆಘ್ರಾಣಿಸುತ್ತಾ ಉದ್ಯಾನವನದ ಸಮಷ್ಟಿಸೌಂದರ್ಯವನ್ನು ಅನುಭವಿಸಿ ಪ್ರಫುಲ್ಲಿತನಾಗುತ್ತಾನೆ. ಹಾಗೆಯೇ ಜಗತ್ತಿನ ಎಲ್ಲ ಧರ್ಮೀಯರೂ ತಮ್ಮ ತಮ್ಮ ಧರ್ಮ ಪ್ರವರ್ತಕರ, ಪ್ರವಾದಿಗಳ, ಶರಣರ, ಸಾಧು-ಸಂತರ ವಿಶಿಷ್ಟ ಧರ್ಮಬೋಧನೆಗಳನ್ನು, ನಿರ್ದಿಷ್ಟ ತತ್ವ ಸಿದ್ಧಾಂತಗಳನ್ನು ಪಾಲಿಸುವುದರ ಜೊತೆಗೆ, ಜಗತ್ತಿನ ಎಲ್ಲ ಧರ್ಮಪ್ರವರ್ತಕರ, ಪ್ರವಾದಿಗಳ, ಶರಣರ, ಸಾಧು-ಸಂತರ ಸಮಷ್ಟಿ ಚೇತನದಿಂದ ಹೊರಹೊಮ್ಮಿದ ವಿಶಾಲ ತತ್ವಗಳ ಸೊಬಗನ್ನು ಸವಿದು ಆನಂದಿಸಬೇಕು. "ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತಃ!" ನಮಗೆ ಕಲ್ಯಾಣಕಾರಕವಾದ ವಿಚಾರಗಳು ಎಲ್ಲೆಡೆಯಿಂದ ಬರಲಿ! ಯಾವುದೇ ಮತಧರ್ಮದ ಮೂಲದಿಂದ ಬಂದರೂ ಒಳ್ಳೆಯ ವಿಚಾರಗಳನ್ನು ಸ್ವೀಕರಿಸುವ ವಿಶಾಲ ಹೃದಯ ನಮ್ಮದಾಗಿರಲಿ!

**28.5.2008**

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑